# ಗ್ರಾಮೀಣ ವಿನೋದಾವಳಿ ತೆರೆಗೆ


ಗೀತಾ–ಪ್ರಭಾಸ್

■ ಸ್ಮಿತಾ ಶಿರೂರ

ಹಾಸ್ಯ ರಸಾಯನ ಉಣಬಡಿಸುವ ಗಂಗಾವತಿ ಪ್ರಾಣೇಶ್ ಚಿರಪರಿಚಿತ. ರೀಲ್ಸ್ ಪ್ರೇಮಿಗಳಿಗೆ ಈಚೆಗೆ ಗಂಗಾವತಿ ತಾಲ್ಲೂಕಿನಿಂದ ಮತ್ತೊಂದು ನಗೆಬುಗ್ಗೆ ಉಕ್ಕಿಸುವ ಕುಟುಂಬವೊಂದರ ಪರಿಚಯವಾಗಿದೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಹಿರೇಬೆಣಕಲ್ ಗ್ರಾಮದ ಪ್ರಭಾಸ್ ಹಾಗೂ ಗೀತಾ ದಂಪತಿ ಕಳೆದ ಒಂದು ವರ್ಷದಿಂದ ಹಾಸ್ಯಮಯ ರೀಲ್ಸ್ ಮಾಡಿ ಜನಮನ್ನಣೆ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪ್ರಭಾಸ್ ಹಾಗೂ ಗೀತಾ ದಂಪತಿ ಸೃಷ್ಟಿಸಿದ ಚಿಕ್ಕ ಚಿಕ್ಕ ರೀಲ್‌ಗಳಿಗೆ ಇನ್‌ಸ್ಟಾಗ್ರಾಂ ಹಾಗೂ ಫೇಸ್‌ಬುಕ್‌ನಲ್ಲಿ 4.5 ಲಕ್ಷಗಳಷ್ಟು ಫಾಲೊವರ್ಸ್‌ಗಳು ಹುಟ್ಟಿಕೊಂಡಿದ್ದಾರೆ. ನಿತ್ಯ ಜೀವನದಲ್ಲಿ ನಾವಾಡುವ ಸಾಮಾನ್ಯ ಸಂಭಾಷಣೆಗಳಲ್ಲೇ ಅಡಗಿರುವ ವಿನೋದಾವಳಿಗಳನ್ನು ಈ ದಂಪತಿ ಮನೋಜ್ಞವಾಗಿ ತೆರೆಗೆ ತರುತ್ತಿದ್ದಾರೆ. ಇವರ ಸರಳ ಸಂಭಾಷಣೆ, ಅಭಿನಯಕ್ಕೆ ವೀಕ್ಷಕರಿಂದ ಮೆಚ್ಚುಗೆಯ ಮಹಾಪೂರವೇ ಬಂದಿದೆ.

ಮೊದಲು ಯೂಟ್ಯೂಬ್, ಫೇಸ್‌ಬುಕ್‌ಗಳಲ್ಲಿ ಬರುವ ವಿಡಿಯೊಗಳಿಗೆ ಲಿಪ್‌ಸಿಂಕ್ ಮಾಡಿ ವಿಡಿಯೊ ಮಾಡುತ್ತಿದ್ದ ಪ್ರಭಾಸ್ ಕ್ರಮೇಣ ರೀಲ್ಸ್ ಮಾಡುವ ಪ್ರಯೋಗಕ್ಕಿಳಿದರು. ನಿತ್ಯ ನಡೆಯುವ ಸಂಭಾಷಣೆಗಳಿಗೇ ಹಾಸ್ಯಲೇಪನ ಮಾಡಿ ಸಾಮಾಜಿಕ ಜಾಲತಾಣಗಳಿಗೆ ಅಪ್‌ಲೋಡ್ ಮಾಡಿದರು. ಇವರ ಈ ಪ್ರತಿಭೆಯನ್ನು ಜನರು ಗುರುತಿಸತೊಡಗಿದರು. ಪತ್ನಿ ಗೀತಾ ಹಾಗೂ ತಾಯಿ ಶಿವಪುತ್ರಮ್ಮ ಅವರನ್ನೂ ತಮ್ಮ ರೀಲ್ಸ್ ಜಗತ್ತಿಗೆ ಕರೆತಂದರು. ಈಗ ದಿನಕ್ಕೊಂದು ರೀಲ್ ಮಾಡಿ ಅಪ್‌ಲೋಡ್ ಮಾಡುತ್ತಿದ್ದಾರೆ. ಗೀತಾ ಅವರ ಅಕ್ಕನ ಮಗಳು ಅನುಷಾ ಸಹ ಹಲವು ರೀಲ್‌ಗಳ ಭಾಗವಾಗಿದ್ದಾರೆ. ಆಗಾಗ ಕುಟುಂಬದ ಉಳಿದ ಸದಸ್ಯರನ್ನು, ಸ್ನೇಹಿತರನ್ನು ಸಹ ಸೇರಿಸಿ ವಿಡಿಯೊ ಮಾಡುತ್ತಾರೆ.

ಗ್ರಾಮದಲ್ಲಿ ಇಟ್ಟಂಗಿ ಭಟ್ಟಿ ಹೊಂದಿರುವ ಪ್ರಭಾಸ್ ಅವರು ಬಿಡುವಿನ ವೇಳೆಯಲ್ಲಿ ರೀಲ್ಸ್ ಮಾಡುತ್ತಾರೆ. ಈಗಾಗಲೇ 600ಕ್ಕೂ ಹೆಚ್ಚು ರೀಲ್ಸ್ ಮಾಡಿರುವ ಇವರು ವಿಡಿಯೊ ಶೂಟ್ ಮಾಡಲು  ಮದುವೆಯಾದ ಕೂಡಲೇ ಉದ್ಯೋಗ ಹುಡುಕುತ್ತಿದ್ದ ಗೀತಾ ಅವರಿಗೆ ಪತಿ ಪ್ರಭಾಸ್ ರೀಲ್ಸ್ ಮಾಡುವ ಯೋಜನೆ ವಿವರಿಸಿದರು. ಅವರ ಸಾಥ್ ಸಿಕ್ಕಿತು. ತಾಯಿ ಶಿವಪುತ್ರಮ್ಮ ಅವರೂ ಮಗನಿಗೆ ಬೆಂಬಲವಾಗಿ ನಿಂತು ರೀಲ್‌ಗಳಲ್ಲಿ ಡೈಲಾಗ್ ಹೇಳತೊಡಗಿದರು. ಈಗ ಈ ಕುಟುಂಬದ ವಿಡಿಯೊಗಳಿಗೆ ನಿರೀಕ್ಷೆಗೂ ಮೀರಿ ಜನ ಬೆಂಬಲ ಹಾಗೂ ಆರ್ಥಿಕ ಶಕ್ತಿಯೂ ಲಭಿಸಿದೆ.

‘ರೀಲ್ಸ್ ಮಾಡತೊಡಗಿದಾಗಿನಿಂದ ಜನರು ಎಲ್ಲಿ ಹೋದರೂ ಗುರುತಿಸುತ್ತಿದ್ದಾರೆ. ನನಗೆ ನಟನೆಯ ಯಾವುದೇ ತರಬೇತಿ ಇಲ್ಲ. ವಿಡಿಯೊ ಮಾಡಲು, ಎಡಿಟಿಂಗ್ ಮಾಡಲು ಸಹ ತರಬೇತಿ ಪಡೆದಿಲ್ಲ. ಯೂಟ್ಯೂಬ್ ನೋಡಿಯೇ ಇದನ್ನು ಕಲಿತು ಕುಟುಂಬದ ಸಹಾಯದಿಂದ ಮುಂದುವರಿಸುತ್ತಿದ್ದೇನೆ. ವಿಡಿಯೊಗಾಗಿ ಮೊಬೈಲ್ ಸ್ಟ್ಯಾಂಡ್ ಒಂದನ್ನು ಖರೀದಿಸಿದ್ದೇನೆ. ಇದು ಬಿಟ್ಟರೆ ಹೆಚ್ಚಿನ ಖರ್ಚೇನೂ ಇಲ್ಲ’ ಎಂದು ಅವರು ತಿಳಿಸಿದರು.

‘ಮನೆಯಲ್ಲಿ ಹಾಗೂ ಮನೆಯ ಸುತ್ತಮುತ್ತಲೇ ರೀಲ್ಸ್ ಮಾಡುತ್ತೇವೆ. ಸಾಮಾಜಿಕ ಜಾಲತಾಣಗಳಲ್ಲಿ ದಿನವೂ ಬರುವ ಹೊಸಹೊಸ ರೀಲ್ಸ್‌ಗಳನ್ನು ನೋಡುತ್ತಲೇ ನವನವೀನ ವಿಷಯಗಳು ಹೊಳೆಯುತ್ತವೆ. ಕೆಲವೊಮ್ಮೆ ಟ್ರೆಂಡ್ ಆದ ರೀಲ್ಸ್‌ಗಳನ್ನು ಅನುಸರಿಸಿ ಅದಕ್ಕೆ ಇನ್ನಷ್ಟು ನಮ್ಮ ಆಲೋಚನೆಗಳನ್ನು ಸೇರಿಸಿ ಹೊಸತೊಂದು ದೃಶ್ಯ ಸಿದ್ಧಪಡಿಸುತ್ತೇವೆ. ಗ್ರಾಮ್ಯ ಸೊಗಡಿನ ನಮ್ಮ ನಗೆಚಟಾಕಿಗಳನ್ನು ಜನ ನೋಡಿ ಖುಷಿ ಪಡುತ್ತಾರೆ ಎಂಬುದೇ ನಮಗೆ ಸಂತಸ ತರುತ್ತದೆ’ ಎಂದು ಪ್ರಭಾಸ್ ತಿಳಿಸಿದರು.

‘ನಾನು ಶಾಲಾ ದಿನಗಳಲ್ಲೂ ನಾಟಕವಾಡಿ ಅಭ್ಯಾಸವಿಲ್ಲ. ಮದುವೆಯಾದ ಮೇಲೆ ರೀಲ್ಸ್ ಮಾಡುವ ಯೋಜನೆಯನ್ನು ಪ್ರಭಾಸ್ ಹೇಳಿದಾಗ ಮೊದಲು ಹಿಂಜರಿಕೆ ಎನಿಸಿತು. ನಟನೆ ಲೀಲಾಜಾಲವೇನಲ್ಲ. ಆದರೆ ಕ್ರಮೇಣ ಅಭ್ಯಾಸವಾಗಿದೆ’ ಎಂದು ಗೀತಾ ತಿಳಿಸಿದರು.

ಪ್ರಭಾಸ್ ಅವರು ಲಿಂಗದಳ್ಳಿ ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ, ಬಸವಪಟ್ಟಣ ಸರ್ಕಾರಿ ಬಾಲಕರ ಶಾಲೆಯಲ್ಲಿ ಪ್ರೌಢಶಿಕ್ಷಣ ಹಾಗೂ ಗಂಗಾವತಿಯಲ್ಲಿ ಪದವಿ ಓದಿದ್ದಾರೆ. ಗೀತಾ ಲಿಂಗದಳ್ಳಿಯಲ್ಲಿ ಪ್ರಾಥಮಿಕ, ಉಡುಂಕಲ್‌ನಲ್ಲಿ ಮಾಧ್ಯಮಿಕ ಹಾಗೂ ಗಂಗಾವತಿಯಲ್ಲಿ ಕಾಲೇಜು ವಿದ್ಯಾಭ್ಯಾಸ ಮಾಡಿದ್ದಾರೆ.


ಶಿವಪುತ್ರಮ್ಮ, ಅನುಷಾ

ಚಿತ್ರನಟ ಯಶ್ ಅಭಿಮಾನಿಯಾಗಿರುವ ಪ್ರಭಾಸ್ ಅವರು ತಮ್ಮ ಇನ್‌ಸ್ಟಾಗ್ರಾಂ ಖಾತೆಗೆ ಪ್ರಭಾಸ್_ಗೀತಾ_ಯಶ್ ಎಂದು ಹೆಸರು ಇರಿಸಿದ್ದಾರೆ. ಸಾಮಾಜಿಕ ಜಾಲತಾಣಗಳ ಮೂಲಕ ತಂತ್ರಜ್ಞಾನ ಹಳ್ಳಿಹಳ್ಳಿಗೂ, ಗ್ರಾಮೀಣ ಜನರಿಗೂ ತಲುಪಿರುವುದರಿಂದ ರೀಲ್ಸ್ ಜಗತ್ತಿನಲ್ಲಿ ಹಲವು ಗ್ರಾಮೀಣ ಪ್ರತಿಭೆಗಳು ಮಿಂಚುತ್ತಿವೆ. ಇದಕ್ಕೆ ಪ್ರಭಾಸ್–ಗೀತಾ ದಂಪತಿಯ ರೀಲ್ಸ್‌ಗಳು ಉತ್ತಮ ನಿದರ್ಶನ.

■